ಸಾಕ್ಷಿಯನ್ನು ದಿನಾಂಕ **09.12.2021** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು. (ವಿಶೇಷ ಸರಕಾರಿ ಅಭಿಯೋಜಕರ ಸಮ್ಮತಿಯ ಮೇರೆಗೆ ಹಾಗೂ ಆರೋಪಿ ಪರ ವಕೀಲರ ವಿನಂತಿಯ ಮೇರೆಗೆ ಸಾಕ್ಷಿಯ ಮುಂದುವರಿದ ಮುಖ್ಯವಿಚಾರಣೆಗೆ ಅವಕಾಶ ನೀಡಲಾಗಿದೆ.)

ಮುಂದುವರೆದ ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

23. ಸಾಕ್ಷಿ ದಿನಾಂಕ 31.03.2012 ರ ಹಿಂಬರಹದ ಸ್ಥಳ ಪ್ರತಿಯನ್ನು, 2011-2012 ರ ಕಾರ್ಯನಿರ್ವಹಣಾ ವರದಿಯ ಪ್ರಮಾಣೀಕೃತ ನಕಲನ್ನು ಹಾಗೂ ಅದೇ ವರ್ಷದ ನಮೂನೆ 1 ಮತ್ತು 2 ರಲ್ಲಿರುವ ಆಸ್ತಿ ಮತ್ತು ದಾಯಿತ್ವ ಪತ್ರಗಳ ದೃಢೀಕರಿಸಿದ ಪತ್ರಗಳನ್ನು ಮಂಗಳೂರು ಮಹಾನಗರ ಪಾಲಿಕೆಯವರು ನಾನು ಮನೆ ಕಟ್ಟಿಸಲು ಮತ್ತು ನಿವೇಶನವನ್ನು ಖರೀದಿಸಲು ಅರ್ಜಿ ನೀಡಿದಾಗ ಮಾಡಿದ ಪ್ರಕ್ರಿಯೆಗಳ ಕಡತವನ್ನು ಹಾಗೂ ದಿನಾಂಕ 06.07.2014 ರಂದು ಸಾಕ್ಷಿ ಮಂಗಳೂರು ಮಹಾನಗರ ಪಾಲಿಕೆಗೆ ನೀಡಿದ ಪತ್ರವನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ ಡಿ16 ರಿಂದ ನಿಶಾನೆ ಡಿ-20 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ.

24. ನನ್ನ ತಂದೆಗೆ ಒಟ್ಟು 11 ಜನ ಮಕ್ಕಳು ಜನಿಸಿದ್ದೇವೆ. ಅದರಲ್ಲಿ 5 ಜನ ಗಂಡು ಮಕ್ಕಳು ಹಾಗೂ 6 ಜನ ಹೆಣ್ಣು ಮಕ್ಕಳು ಇದ್ದಾರೆ. ಇವರಲ್ಲಿ ಒಬ್ಬ ಹೆಣ್ಣು ಮಗಳು ಮರಣ ಹೊಂದಿದ್ದಾಳೆ. ನಾನು ಮತ್ತು ನನ್ನ ಸಹೋದರ, ಸಹೋದರಿಯವರು ನನ್ನ ತಂದೆ ವಾಸವಿರುವ ಸ್ಥಳದಲ್ಲಿ ವಾಸವಿರುವುದಿಲ್ಲ. ನಾವೆಲ್ಲರೂ ಪ್ರತ್ಯೇಕ ಪ್ರತ್ಯೇಕ ವಾಸವಿದ್ದೇವೆ. ಈಗ ನನ್ನ ತಂದೆ ಮತ್ತು ತಾಯಿ ಪುತ್ತೂರಿನ ನಿಡ್ವಳ್ಳಿ ಗ್ರಾಮದಲ್ಲಿ ನನ್ನ ಸಹೋದರನಾದ ರಮೇಶ್ ಈತನೊಂದಿಗೆ ವಾಸವಿದ್ದಾರೆ. ಅವರು ಆ ಮನೆಯಲ್ಲಿ 40 ರಿಂದ 45 ವರ್ಷಗಳಿಂದ ವಾಸವಿದ್ದಾರೆ. 1985 ರಿಂದ ನಾನು ಮಂಗಳೂರಿನಲ್ಲಿ

ವಾಸವಿರಲು ಪ್ರಾರಂಭಿಸಿದ್ದೇನೆ ಮತ್ತು ಅಂದಿನಿಂದ ಇಂದಿನವರೆಗೆ ಪ್ರತ್ಯೇಕವಾಗಿ ವಾಸವಿದ್ದೇನೆ. 2002-2003 ರಲ್ಲಿ ನಾನು ಕದ್ರಿಯಲ್ಲಿರುವ ನೀಲಾಂಜನ ಎಂಬ ಮನೆಗೆ ಬಂದು ವಾಸವಿದ್ದೇನೆ.

25. ನಿಶಾನೆ ಡಿ-1 ರಲ್ಲಿರುವ ಅಂದಾಜುಪಟ್ಟಿಯನ್ನು ನಾನು ಬ್ಯಾಂಕಿನಿಂದ ಸಾಲ ಪಡೆಯುವ ಉದ್ದೇಶದಿಂದ ಮಾಡಿಸಿದ್ದೆನು. ಆ ಉದ್ದೇಶವನ್ನು ನಿಡಿ-1 ರಲ್ಲಿ ಕಾಣಿಸಿಲ್ಲ ಅಂದರೆ ಸರಿ. ನಿಡಿ-1 ನ್ನು ನೀಡಿದಂತಹ ವಿನಾಯಕ ಪೈ ಇವರ ಪರಿಚಯ ನನಗೆ ಅದರಲ್ಲಿರುವ ಮನೆಯನ್ನು ಕಟ್ಟಿಸುವ ಸಂದರ್ಭದಲ್ಲಿ ಆಗಿರುತ್ತದೆ. ವಿನಾಯಕ ಪೈ ಇವರು ಮಂಗಳೂರು ಮಹಾನಗರ ಪಾಲಿಕೆಯ Licensed Building Designer ಆಗಿರುತ್ತಾನೆ. ನಾನು ಐಟಂ ನಂ.1 ರಲ್ಲಿರುವ ಮನೆ ಕಟ್ಟಿಸುವಾಗ ಮಂಗಳೂರು ಮಹಾನಗರ ಪಾಲಿಕೆಯಿಂದ ಪರವಾನಿಗೆ ಪಡೆದಿದ್ದೇನೆ ಮತ್ತು ಅದನ್ನು ನನ್ನ ಶೆಡ್ಯೂಲ್ ದೊಂದಿಗೆ ಹಾಜರುಪಡಿಸಿದ್ದೇನೆ. ನಿಡಿ-1 ರಲ್ಲಿ ಕಡಿಮೆ ವೆಚ್ಚವನ್ನು ಕಾಣಿಸಲಾಗಿದೆ ಅಂದರೆ ಸರಿಯಲ್ಲ. ಅದನ್ನು ನನ್ನ ಕೇಸಿಗೆ ಅನುಕೂಲವಾಗಲು ತಯಾರಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

26. ವಿನಾಯಕ ಪೈ ಈತನೇ ನಿಡಿ-1 ರಲ್ಲಿರುವ ಮನೆಯ ಕಟ್ಟಡದ ಉಸ್ತುವಾರಿಯನ್ನು ಮಾಡಿರುತ್ತಾನೆ. ನಾನು ತನಿಖಾಧಿಕಾರಿಗೆ ಆ ಮನೆ ಕಟ್ಟಿಸಲು ಖರೀದಿಸಿದಂತಹ ಕಚ್ಚಾ ಸಾಮಗ್ರಿಗಳ ಬಿಲ್ಲುಗಳನ್ನು ಪೂರೈಸಿರುವುದಿಲ್ಲ.

27. ನನ್ನ ಮೇಲೆ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನನ್ನ ತಂದೆಯ ಜಮೀನಿನಿಂದ ನನಗೆ ಬಂದಂತಹ ಕೃಷಿ ಆದಾಯದ ಅಂದಾಜುಪಟ್ಟಿಯನ್ನು

ಪಡೆದಿರಲಿಲ್ಲ. ನನಗೆ ಕೃಷಿ ಆದಾಯ ಬಂದದ್ದನ್ನು ನಾನು ನನ್ನ ಆಸ್ತಿ ದಾಯಿತ್ವ ಪಟ್ಟಿಗಳಲ್ಲಿ ಆಯಾ ವರ್ಷ ಕಾಣಿಸಿದ್ದೇನೆ. ನಿಶಾನೆ ಡಿ-2 ನ್ನು ನೀಡಿದಂತಹ ಅಧಿಕಾರಿ ನನ್ನ ತಂದೆಯ ಜಮೀನುಗಳಿಗೆ ಯಾವ ದಿನಾಂಕದಂದು ಬಂದಿದ್ದನ್ನು ಎಂಬುದು ನೆನಪಿರುವುದಿಲ್ಲ. ನಿಡಿ-2 ನ್ನು ನೀಡಿದಂತಹ ಅಧಿಕಾರಿ ತುಮಕೂರಿನವರು ಅಂದರೆ ಸರಿ. ಆತ ಮಂಗಳೂರು ಜಿಲ್ಲೆಯಲ್ಲಿ ಕರ್ತವ್ಯ ಮಾಡಿದ್ದಾನೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ಜಮೀನುಗಳಲ್ಲಿ ಅಂದಾಜು 1000 ದಿಂದ 1500 ಅಡಿಕೆ ಮರಗಳು ಇದ್ದವು. ಆ ಜಮೀನುಗಳಲ್ಲಿ ಅಡಿಕೆ ಮರಗಳು ಇರಲಿಲ್ಲ ಅಂದರೆ ಸರಿಯಲ್ಲ. ನಿಡಿ-2 ನ್ನು ನಾನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ.

28. ನನ್ನ ತಂದೆಯಿಂದ ನಾನು ಪಡೆದ ಹಣಕ್ಕೆ ಸಂಬಂಧಿಸಿ ಯಾವುದೇ ದಾಖಲೆಗಳು ಇರುವುದಿಲ್ಲ. ನಿಡಿ-2 ರಲ್ಲಿ ಕೃಷಿ ಉಪ ಉತ್ಪನ್ನಗಳನ್ನು ಕಾಣಿಸಿಲ್ಲ ಅಂದರೆ ಸರಿ. ನಿಡಿ-2 ರಲ್ಲಿ ಕಾಣಿಸಿದ ಕೃಷಿ ಉತ್ಪನ್ನಗಳ ದರಗಳನ್ನು ಕಂಡುಕೊಳ್ಳಲು ನಾನು ಎ.ಪಿ.ಎಂ.ಸಿ.ಯಿಂದ ದಾಖಲೆಗಳನ್ನು ಪಡೆದಿದ್ದೇನೆ.

29. ನನ್ನ ಅತ್ತೆಗೆ ಒಟ್ಟು 7 ಜನ ಹೆಣ್ಣು ಮಕ್ಕಳು ಇದ್ದಾರೆ. ಅವರಿಗೆ ಗಂಡು ಮಕ್ಕಳು ಇರುವುದಿಲ್ಲ. ನನ್ನ ಅತ್ತೆ ಜೀವಿತವಿದ್ದಾರೆ. ನನ್ನ ತಂದೆ ಮತ್ತು ತಾಯಿ ಜೀವಿತವಿದ್ದಾರೆ. ನನ್ನ ಮಾವ ಮರಣ ಹೊಂದಿದ್ದಾನೆ. ನನ್ನ ಹೆಂಡತಿಯ ಎಲ್ಲಾ ಸಹೋದರಿಯವರು ಜೀವಿತವಿದ್ದಾರೆ. ನನ್ನ ಅತ್ತೆಯ ಜಮೀನುಗಳನ್ನು ನನ್ನ ಹೆಂಡತಿ ಮತ್ತು ಅತ್ತೆ ನೋಡಿಕೊಳ್ಳುತ್ತಾರೆ. ನನ್ನ ಹೆಂಡತಿ ನನ್ನೊಂದಿಗೆ ಕದ್ರಿಯಲ್ಲಿ ಮೊದಲಿನಿಂದ ವಾಸವಿದ್ದಾಳೆ ಅಂದರೆ ಸರಿ. ನನ್ನ ಅತ್ತೆ ಬಂಟ್ವಾಳ ತಾಲೂಕಿನ ಕುರ್ನಾಡು ಗ್ರಾಮದಲ್ಲಿ

ವಾಸವಿದ್ದಾಳೆ. ಅವಳು ತನ್ನ ಜಮೀನಿನಲ್ಲಿ ಅಡಿಕೆ, ತೆಂಗು, ಭತ್ತ ಮತ್ತು ತರಕಾರಿ ಬೆಳೆಯುತ್ತಾಳೆ. ಕುರ್ನಾಡು ಗ್ರಾಮ ಮಂಗಳೂರಿನಿಂದ ಸುಮಾರು 10 ಕಿ.ಮೀ., ಅಂತರದಲ್ಲಿದೆ. ನಿಡ್ಪಳ್ಳಿ ಗ್ರಾಮ ಮಂಗಳೂರಿನಿಂದ ಸುಮಾರು 55 ಕಿ.ಮೀ., ಅಂತರದಲ್ಲಿದೆ. ನಿಶಾನೆ ಡಿ-11 ರಲ್ಲಿರುವ ಜಮೀನುಗಳಿಗೆ ಅದನ್ನು ನೀಡಿದ ಅಧಿಕಾರಿ ಯಾವ ದಿನಾಂಕದಂದು ಹೋಗಿದ್ದನು ಎಂಬುದು ನನಗೆ ಗೊತ್ತಿರುವುದಿಲ್ಲ. ಹುಲ್ಲನ್ನು ಕೃಷಿಕರು ಮಾರಾಟ ಮಾಡುವುದಿಲ್ಲ ಅಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಮತ್ತು ನನ್ನ ಅತ್ತೆ ಸೇರಿಕೊಂಡು ನಿಡಿ-11 ನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

30. 2005 ರಿಂದ ನನ್ನ ಹೆಂಡತಿ ಆದಾಯ ತೆರಿಗೆ ರಿಟರ್ನ್ ಕಟ್ಟುತ್ತಿದ್ದದ್ದು ನನಗೆ ಗೊತ್ತಿದೆ. 2005-2006 ನೇ ಸಾಲಿನ ಆದಾಯ ತೆರಿಗೆ ರಿಟರ್ನ್ ನ್ನು ನಾನು ತನಿಖಾಧಿಕಾರಿಗೆ ನೀಡಿರುತ್ತೇನೆ. ನನ ಹೆಂಡತಿ ಪ್ರತೀ ವರ್ಷ ಆದಾಯ ತೆರಿಗೆ ರಿಟರ್ನ್ ಕಟ್ಟುತ್ತಾಳೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿರುವುದಿಲ್ಲ. ನನ್ನ ಹೆಂಡತಿ ನನ್ನ ಮನೆಯ ಅಕ್ಕಪಕ್ಕದಲ್ಲಿದ್ದಂತಹ ಬೇರೆಯವರ ಮನೆಗೆ ಹೋಗಿ ಟ್ಯೂಷನ್ ನೀಡುತ್ತಿದ್ದಳು ಹಾಗೂ ನನ್ನ ಮನೆಗೆ ಬರುತ್ತಿದ್ದಂತಹ ವಿದ್ಯಾರ್ಥಿಗಳಿಗೆ ಟ್ಯೂಷನ್ ನೀಡುತ್ತಿದ್ದಳು. ನನ್ನ ಹೆಂಡತಿಗೆ ಪ್ರತೀ ವರ್ಷ ಟ್ಯೂಷನ್ ನಿಂದಾಗಿ ರೂ.50,000/- ದಿಂದ ರೂ.1,00,000/- ವರೆಗೆ ಆದಾಯ ಬರುತ್ತಿತ್ತು. ಟ್ಯೂಷನ್ ನೀಡುವಂತಹ ಸಲಕರಣೆಗಳು ನಮ್ಮ ಮನೆಯಲ್ಲಿ ಇದ್ದವು.

31. ನನ್ನ ಹೆಂಡತಿ ಟೈಲರಿಂಗ್ ಉದ್ಯೋಗವನ್ನು ನನ್ನ ಮನೆಯಲ್ಲಿ ಮಾಡುತ್ತಿದ್ದಳು. ಆ ಉದ್ಯೋಗದ ಕುರಿತು ದಾಖಲೆ ಇರುವುದಿಲ್ಲ. ನನ್ನ ಹೆಂಡತಿ ಟ್ಯೂಷನ್ ಮಾಡುತ್ತಿರಲಿಲ್ಲ ಮತ್ತು ಟೈಲರಿಂಗ್ ಉದ್ಯೋಗ ಮಾಡುತ್ತಿರಲಿಲ್ಲ ಅಂದರೆ

ಸರಿಯಲ್ಲ.

32. ನನಗೆ ಸೀಮಾ ಕುಮಾರಿ, ಚಂದ್ರಶೇಖರ್ ಶೆಣೈ, ನಿರ್ಮಲಾ ಶೆಣೈ ಇವರು ಹಣವನ್ನು ನೀಡಿದಾಗ ಯಾವುದೇ ದಾಖಲೆಗಳನ್ನು ಮಾಡಿರುವುದಿಲ್ಲ. ಇವರು ನೀಡಿದ ಹಣವನ್ನು ನಾನು ನನ್ನ ಆದಾಯ ತೆರಿಗೆ ರಿಟರ್ನ್ ದಲ್ಲಿ ತೋರಿಸಿರುತ್ತೇನೆ. ಆ ಹಣವನ್ನು ನನ್ನ ಆಸ್ತಿ ಮತ್ತು ದಾಯಿತ್ವದ ಪತ್ರ ಗಳಲ್ಲಿ ಕಾಣಿಸಿರುವುದಿಲ್ಲ ಆ ಮೂರೂ ಜನರು ಬರೆದುಕೊಟ್ಟಂತಹ ಪ್ರಮಾಣಪತ್ರದ ಛಾಪಾ ಕಾಗದಗಳನ್ನು ಒಂದೇ ದಿನ ಖರೀದಿಸಲಾಗಿದೆ ಅಂದರೆ ಸರಿ. ಲೋಕಯ್ಯ ಗೌಡ ಈತನು ನೀಡಿದ ಹಣಕ್ಕೆ ಸಂಬಂಧಿಸಿ ಹಣ ನೀಡಿದಾಗ ಯಾವುದೇ ದಾಖಲೆ ಮಾಡಿರುವುದಿಲ್ಲ. ಅದನ್ನು ನಾನು ಆಸ್ತಿ ದಾಯಿತ್ವ ಪತ್ರ ಗಳಲ್ಲಿ ಕಾಣಿಸಿಲ್ಲ ಆ ಹಣವನ್ನು ನನ್ನ ಆದಾಯ ತೆರಿಗೆ ರಿಟರ್ನ್ ದಲ್ಲಿ ಕಾಣಿಸಿದ್ದೇನೋ ಅಥವಾ ಇಲ್ಲವೋ ಎಂಬುದು ನೆನಪಿಲ್ಲ. ಲೋಕಯ್ಯ ಗೌಡ ಇವನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ಮಾಡಿ ನಿವೃತ್ತಿ ಹೊಂದಿದ್ದಾನೆ ಅಂದರೆ ಸರಿ. ಈ ನಾಲ್ಕೂ ಜನರು ನನಗೆ ಹಣ ನೀಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅವರೊಂದಿಗೆ ಸೇರಿ ನಾನು ಅವರ ಹೆಸರಿನಲ್ಲಿ ಪ್ರಮಾಣಪತ್ರ ಗಳನ್ನು ಕೇಸಿಗೆ ಅನುಕೂಲವಾಗಲು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ.

(ಈ ಹಂತದಲ್ಲಿ ವಿಶೇಷ ಸರಕಾರಿ ಅಭಿಯೋಜಕರು ಸಾಕ್ಷಿ ಈ ದಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳ ಕುರಿತು ಪಾಟೀ ಸವಾಲನ್ನು ಮುಂದೂಡಲು ವಿನಂತಿಸಿದ್ದಾರೆ. ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

Spl.C.No.24/2015 DW-1
Date: 09.12.2021

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.